ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೯**

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತಾರನೇ ಅಧಿವೇಶನ

## ಶುಕ್ರವಾರ, ದಿನಾಂಕ: ೨೨ನೇ ಆಗಸ್ಟ್, ೨೦೨೫

---

### ಸಮೂಹ – V

೧. ಸಮಾಜ ಕಲ್ಯಾಣ ಸಚಿವರು

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

೩. ಕೃಷಿ ಸಚಿವರು

೪. ಕಾರ್ಮಿಕ ಸಚಿವರು

೫. ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

೬. ಯೋಜನೆ ಮತ್ತು ಸಾಂಖ್ಯಿಕ ಸಚಿವರು

೭. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

---

## ವಿವಿಧ ಅರಣ್ಯ ಪ್ರದೇಶದಲ್ಲಿ ವಾಸವಾಗಿರುವ ಗಿರಿಜನರ ಮಾಹಿತಿ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೧೨೧ (೧೨೮೨) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಪ್ರಸ್ತುತವಾಗಿ ವಾಸವಿರುವ ಗಿರಿಜನರ ಸಂಖ್ಯೆ ಎಷ್ಟು ; (ವಿವಿಧ ಅರಣ್ಯ ಪ್ರದೇಶವಾರು ಒದಗಿಸುವುದು)

(ಆ) ಸದರಿ ಜನಾಂಗದವರು ಗಳಿಸಿಕೊಂಡಿರುವ ವಿಶೇಷ ನೈಪುಣ್ಯತೆಗಳನ್ನು ಸರ್ಕಾರ ಯಾವ ರೀತಿಯ ಅಧ್ಯಯನ ಮಾಡಿದೆ ;

(ಇ) ಸದರಿಯವರಿಗೆ ಸರ್ಕಾರ ಎಲ್ಲರಿಗೂ ಯಾವ ರೀತಿಯಲ್ಲಿ ಶಿಕ್ಷಣ ನೀಡುವ ವ್ಯವಸ್ಥೆಯನ್ನು ಮಾಡಿದೆ ;

(ಈ) ಇವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸರ್ಕಾರ ಮಾಡಿರುವ ಪ್ರಯತ್ನಗಳೇನು ? (ಈ ಬಗ್ಗೆ ಸಾಧಿಸಿರುವ ಸಾಧನೆಗಳನ್ನು ವರ್ಷವಾರು ಅಂಕಿ–ಅಂಶಗಳೊಂದಿಗೆ ಮಾಹಿತಿ ನೀಡುವುದು)

## ಕಾರ್ಮಿಕರಿಗೆ ಇಲಾಖೆಯಿಂದ ಆರೋಗ್ಯ ತಪಾಸಣೆ ನಡೆಸಿರುವ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೧೨೨ (೧೨೬೯) ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಮಾಡಲಾಗಿದೆಯೇ ; ಈ ತಪಾಸಣೆಯನ್ನು ಯಾವ ಸಂಸ್ಥೆಯಿಂದ ಮಾಡಲಾಗಿದೆ ; ಸದರಿ ತಪಾಸಣೆಯನ್ನು ಮಾಡಲು ಇಲಾಖೆಯಿಂದ ಎಷ್ಟು ಅನುದಾನ ನೀಡಲಾಗಿದೆ ; (ಸಂಪೂರ್ಣ ವಿವರ ಒದಗಿಸುವುದು)

(ಆ) ಸದರಿ ತಪಾಸಣೆಯಲ್ಲಿ ಕಾರ್ಮಿಕರಿಗೆ ಯಾವ ಯಾವ ರೀತಿಯ ಪರೀಕ್ಷೆಗಳನ್ನು ನಡೆಸಲಾಗಿದೆ ; (ವಿವರ ಒದಗಿಸುವುದು)

(ಇ) ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಅತಿ ಹೆಚ್ಚು ಹೃದಯಾಘಾತ ಮತ್ತು ಹೃದಯ ಸ್ತಂಭನಗಳ ಪ್ರಕರಣಗಳು ಹೆಚ್ಚುತ್ತಿದ್ದು, ಕಟ್ಟಡ ಕಾರ್ಮಿಕರು ಸೇರಿದಂತೆ ಇತರೆ ಕಾರ್ಮಿಕರು ಶ್ರಮಜೀವಿಗಳಾಗಿದ್ದು, ಇವರ ಹೃದಯದ ಆರೋಗ್ಯ ತಪಾಸಣೆ ಬಗ್ಗೆ ಕೈಗೊಂಡ ಕ್ರಮಗಳೇನು ; ಯಾವ ರೀತಿ ತಪಾಸಣೆ ಮಾಡಲಾಗಿದೆ ? (ವಿವರ ಒದಗಿಸುವುದು)

## ಕಾರ್ಮಿಕ ಇಲಾಖೆಯಲ್ಲಿನ ಕನಿಷ್ಠ ವೇತನದ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೩ (೧೪೦೬) ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರ್ಮಿಕ ಇಲಾಖೆಯಲ್ಲಿ ವೇತನವನ್ನು ಪರಿಷ್ಕರಿಸಲಾಗುತ್ತಿದೆಯೇ ; ಹೌದಾದರೆ, ಅದರ ವಿವರವಾದ ಮಾಹಿತಿ ನೀಡುವುದು ;

(ಆ) ನೆರೆಯ ರಾಜ್ಯಗಳಲ್ಲಿ ಕಾರ್ಮಿಕ ಇಲಾಖೆಯಲ್ಲಿ ನಿಗದಿಯಾದ ಕನಿಷ್ಠ ವೇತನದೊಂದಿಗೆ ನಮ್ಮ ರಾಜ್ಯದ ಕನಿಷ್ಠ ವೇತನವನ್ನು ಹೋಲಿಸಿದ್ದಲ್ಲಿ ಇರುವ ವ್ಯತ್ಯಾಸವೇನು ; (ಮಾಹಿತಿ ನೀಡುವುದು)

(ಇ) ಕನಿಷ್ಠ ವೇತನ ಪರಿಷ್ಕರಣೆಯ ಪರಿಣಾಮವಾಗಿ ರಾಜ್ಯದ ಕೈಗಾರಿಕೆಗಳಿಗೆ ತೊಂದರೆ ಉಂಟಾಗುತ್ತಿರುವ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹೌದಾದರೆ, ಅದರ ವಿರುದ್ಧ ತೆಗೆದುಕೊಳ್ಳಲಾದ ಕ್ರಮಗಳೇನು ?

## ಕರಾವಳಿ ಅಭಿವೃದ್ಧಿ ಮಂಡಳಿಗೆ ವಿಧಾನ ಪರಿಷತ್ತಿನ ಸದಸ್ಯರನ್ನು ನೇಮಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೪ (೧೦೨೬) ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಅಭಿವೃದ್ಧಿ ಮಂಡಳಿಯಲ್ಲಿ ಕರಾವಳಿ ಭಾಗದ ವಿಧಾನ ಪರಿಷತ್ತಿಗೆ ಚುನಾಯಿತರಾದ ಸದಸ್ಯರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡದೆ ಇರಲು ಕಾರಣಗಳೇನು ;

(ಆ) ವಿಧಾನಸಭೆಯಿಂದ ಚುನಾಯಿತರಾದ ಸದಸ್ಯರು ತಮ್ಮ ನೋಡಲ್ ಜಿಲ್ಲೆಯನ್ನಾಗಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿದ್ದಲ್ಲಿ , ಸರ್ಕಾರದಿಂದ ಇವರನ್ನು ಪ್ರತ್ಯೇಕವಾಗಿ ಗುರುತಿಸಲಾಗುತ್ತಿದೆಯೇ ; (ವಿವರ ನೀಡುವುದು)

(ಇ) ನಾಮನಿರ್ದೇಶಿತ ವಿಧಾನ ಪರಿಷತ್ತಿನ ಸದಸ್ಯರು ಈ ಹಿಂದೆ ಮಲೆನಾಡು ಅಭಿವೃದ್ಧಿ ಮಂಡಳಿಗೆ ಸದಸ್ಯರಾಗಿ ನೇಮಕಗೊಂಡಿದ್ದು, ಅವರು ಚುನಾಯಿತ ಸದಸ್ಯರಾದರೂ ಅವರನ್ನು ಮಂಡಳಿಯ ಇತರೆ ಸದಸ್ಯರಂತೆ ಗೌರವಿಸದೆ ಅಗೌರವ ತೋರಿರುವುದು ಸರಿಯೇ ? (ವಿವರ ನೀಡುವುದು)

## ಗೃಹಲಕ್ಷ್ಮಿ ಯೋಜನೆಯಡಿ ಅರ್ಹ ಮಹಿಳೆಯರಿಗೆ IT-GST ಪಾವತಿದಾರರೆಂದು ಪರಿಗಣಿಸಿ ಹಣ ಜಮೆ ಮಾಡದೇ ಇರುವ ಕುರಿತು

**ಶ್ರೀ ಪಿ. ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೫ (೧೩೩೪) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮಹಿಳಾ ಸಬಲೀಕರಣ ಉದ್ದೇಶಕ್ಕಾಗಿ ಗೃಹಲಕ್ಷ್ಮಿ ಯೋಜನೆಯಡಿ ಅರ್ಹ ಫಲಾನುಭವಿಗಳ ಖಾತೆಗೆ ಮಾಸಿಕ ರೂ.೨೦೦೦/– ಗಳನ್ನು ಜಮೆ ಮಾಡುತ್ತಿದ್ದು , ಈ ಯೋಜನೆ ಪ್ರಾರಂಭದಿಂದ ಅನೇಕ ಮಹಿಳೆಯರಿಗೆ ನಿರಂತರವಾಗಿ ಪ್ರತಿ ತಿಂಗಳು ರೂ.೨೦೦೦/– ಗಳಂತೆ ಜಮೆ ಮಾಡುತ್ತಾ ಬರಲಾಗಿದ್ದರೂ ಇತ್ತೀಚೆಗೆ ಹಲವು ತಿಂಗಳುಗಳಿಂದ ಅಲ್ಲಲ್ಲಿ ಮಹಿಳೆಯರು ಐಟಿ–ಜಿಎಸ್‌ಟಿ ಪಾವತಿದಾರರೆಂದು ಪರಿಗಣಿಸಿ ಹಣ ಸಂದಾಯ ಮಾಡದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಅಂತಹವರ ಸಂಖ್ಯೆ ಎಷ್ಟು ; ಬಂದಿದ್ದಲ್ಲಿ, ಅಧಿಕಾರಿಗಳ ನಿರ್ಲಕ್ಷ್ಯದಿಂದ ಹಾಗೂ ತಾಂತ್ರಿಕ ದೋಷದ ನೆಪವೊಡ್ಡಿ ನಿರಾಕರಿಸಲಾಗಿದೆ ಎನ್ನುವ ದೂರುಗಳು ಬಂದಿರುವುದು ನಿಜವೇ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಅಂತಹ ಮಹಿಳೆಯರು ಸಂಬಂಧಪಟ್ಟ ಇಲಾಖೆಯಿಂದ ತೆರಿಗೆ ಪಾವತಿದಾರರು ಅಲ್ಲವೆಂಬ ದಾಖಲೆಗಳನ್ನು ಸಂಬಂಧಪಟ್ಟವರಿಗೆ ಒದಗಿಸಿದ್ದಾಗಿಯೂ ಕೂಡ ಅವರಿಗೆ ಗೃಹಲಕ್ಷ್ಮಿ ಯೋಜನೆಯಡಿ ಅವರ ಖಾತೆಗೆ ಅವಶ್ಯಕ ಹಣವನ್ನು ಜಮೆ ಮಾಡಲಾರದ ಕಾರಣ ಅವರು ತೊಂದರೆ ಅನುಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ತಕ್ಷಣ ಅವರಿಗೆ ಹಣ ಜಮೆ ಮಾಡಲಾಗುವುದೇ ? (ಮಾಹಿತಿ ನೀಡುವುದು )

## ಕಾರ್ಮಿಕ ಸಂಘಟನೆಗಳು ಪ್ರತಿಭಟನೆ ನಡೆಸಿರುವ ಕುರಿತು

**ಶ್ರೀ ಪ್ರತಾಪಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) –**

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೬ (೧೨೬೦+೧೨೫೪) ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಾರ್ಮಿಕರಿಗೆ ಅಗತ್ಯ ಇಲ್ಲದ ಯೋಜನೆಗಳನ್ನು ರೂಪಿಸಿ ಖಾಸಗಿ ಸಂಸ್ಥೆಗಳಿಗೆ ಟೆಂಡರ್ ನೀಡಿರುವುದರಿಂದ, ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳಿಗೆ ತೊಂದರೆಯಾಗುತ್ತಿದೆ ಎಂದು ಹಲವಾರು ಕಾರ್ಮಿಕ ಸಂಘಟನೆಗಳು ರಾಜ್ಯಾದ್ಯಂತ ತೀವ್ರ ಪ್ರತಿಭಟನೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕಾರ್ಮಿಕರಿಗೆ ಉಪಯೋಗವಿಲ್ಲದ ಹೆಲ್ತ್ ಕ್ಯಾಂಪ್, ಆರೋಗ್ಯ ಸಂಚಾರಿ ಕ್ಲಿನಿಕ್, ಆರ್.ಪಿ.ಎಲ್. ಟ್ರೈನಿಂಗ್ ವಿತ್ ಕಿಟ್, ಟೂಲ್ಸ್ ಕಿಟ್, ನ್ಯೂಟ್ರಿಷಿಯನ್ ಕಿಟ್, ಇಮ್ಯೂನಿಟಿ ಕಿಟ್ ರೀತಿಯ ಅನಾವಶ್ಯಕ ಯೋಜನೆಗಳನ್ನು ಕಾರ್ಮಿಕರ ತೀವ್ರ ವಿರೋಧವಿದ್ದರೂ ಜಾರಿಗೆ ತಂದು, ಖಾಸಗಿ ಸಂಸ್ಥೆಗಳಿಗೆ ಟೆಂಡರ್ ನೀಡಲು ಇರುವ ಕಾರಣಗಳೇನು ;

(ಇ) ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಟ್ಟಡ ಕಾರ್ಮಿಕರಿಗೆ ನೀಡಲಾಗುವ ಟೂಲ್‌ಕಿಟ್‌ನಲ್ಲಿರುವ ವಸ್ತುಗಳು ಯಾವುವು ; ಸದರಿ ಟೂಲ್‌ಕಿಟ್‌ಗಳನ್ನು ಯಾವ ಸಂಸ್ಥೆಯಿಂದ ಖರೀದಿಸಲಾಗುತ್ತಿದೆ ; ಟೂಲ್‌ಕಿಟ್‌ನಲ್ಲಿ ಯಾವ ಯಾವ ವಸ್ತುಗಳು ಇವೆ ಅದರ ಹೆಸರು ಪ್ರತಿಯೊಂದು ವಸ್ತುವಿನ ಬೆಲೆಯೊಂದಿಗೆ ವಿವರ ನೀಡುವುದು ;

(ಈ) ಇದುವರೆಗೆ ಎಷ್ಟು ಕಟ್ಟಡ ಕಾರ್ಮಿಕರಿಗೆ ಟೂಲ್‌ಕಿಟ್ ವಿತರಿಸಲಾಗಿದೆ ; ಸದರಿ ಟೂಲ್‌ಕಿಟ್‌ಗೆ ಒಟ್ಟು ಎಷ್ಟು ಮೊತ್ತ ವೆಚ್ಚ ಮಾಡಲಾಗಿದೆ ; (ಕಿಟ್ ಪಡೆದ ಕಟ್ಟಡ ಕಾರ್ಮಿಕರ ಹೆಸರಿನೊಂದಿಗೆ ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಈ ರೀತಿಯ ಕಾರ್ಮಿಕರಿಗೆ ಉಪಯೋಗವಿಲ್ಲದ ಮತ್ತು ಅನಾವಶ್ಯಕವಾಗಿರುವ ಯೋಜನೆಗಳ ಅನುಷ್ಠಾನಕ್ಕೆ ಖಾಸಗಿ ಸಂಸ್ಥೆಗಳಿಗೆ ಟೆಂಡರ್ ನೀಡುವುದರಿಂದ ಹಣ ದುರುಪಯೋಗವಾಗುತ್ತಿದ್ದು, ಅದರ ಬದಲು ಕಾರ್ಮಿಕರಿಗೆ ನೇರ ನಗದು ವರ್ಗಾವಣೆ ಆಗುವಂತಹ ಯೋಜನೆಗಳನ್ನು ಮಾತ್ರ ಜಾರಿಗೆ ತರಲು ಸರ್ಕಾರ ಈ ಕೂಡಲೇ ಅಗತ್ಯ ಕ್ರಮವಹಿಸುವುದೇ ?

## ವಿಧಾನ ಪರಿಷತ್ ಸದಸ್ಯರ ಸ್ಥಳೀಯ ಪ್ರದೇಶ ಅಭಿವೃದ್ಧಿ ಅನುದಾನ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೧೨೭ (೧೩೦೧) ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ವಿಧಾನ ಪರಿಷತ್ ಸದಸ್ಯರ ಸ್ಥಳೀಯ ಪ್ರದೇಶ ಅಭಿವೃದ್ಧಿ ಅನುದಾನವನ್ನು ಎರಡು ವರ್ಷದ ಮೇಲ್ಪಟ್ಟ ಕಾಮಗಾರಿಗಳನ್ನು ಅನುಷ್ಠಾನಗೊಳಿಸದೇ ತಡೆಹಿಡಿಯಲು ಕಾರಣಗಳೇನು ; (ಮಾಹಿತಿ ನೀಡುವುದು)

(ಆ) ಶಾಸಕರ ಪ್ರದೇಶ ಅಭಿವೃದ್ಧಿ ಅನುದಾನವನ್ನು ಶಾಸಕರ ಗಮನಕ್ಕೆ ತರದೇ ಕಾಮಗಾರಿಗಳನ್ನು ತಡೆಹಿಡಿಯಲಾಗಿದೆಯೇ ; ತಡೆಹಿಡಿದಿದ್ದಲ್ಲಿ, ಯಾವ ಕಾರಣಕ್ಕಾಗಿ ಎಂಬುದನ್ನು ಸ್ಪಷ್ಟವಾಗಿ ತಿಳಿಸುವುದು ;

(ಇ) ವಿಧಾನ ಪರಿಷತ್ ಶಾಸಕರ ಸ್ಥಳೀಯ ಪ್ರದೇಶ ಅಭಿವೃದ್ಧಿ ಅನುದಾನವನ್ನು ಮರುಬಳಕೆ ಮಾಡಿಕೊಳ್ಳಲು ಮಾರ್ಗಸೂಚಿಗಳಲ್ಲಿ ಅವಕಾಶ ಇದೆಯೇ ; ಇದ್ದಲ್ಲಿ, ಮಾಹಿತಿ ನೀಡುವುದು ;

(ಈ) ಯಾವ ಯಾವ ಕಾರಣಾಂತರಗಳಿಂದ ಅನುದಾನವನ್ನು ತಡೆಹಿಡಿಯಲಾಗಿದೆ ; (ಸೂಕ್ತ ಕಾರಣದೊಂದಿಗೆ ಮಾಹಿತಿ ನೀಡುವುದು)

(ಉ) ಎರಡು ವರ್ಷ ಮೀರಿ ಬಳಕೆ ಆಗದ ಕಾಮಗಾರಿಗಳ ಅನುದಾನವನ್ನು , ಮರುಬಳಕೆ ಮಾಡಿಕೊಳ್ಳುವ ಅವಕಾಶ ನೀಡದಿರಲು ಕಾರಣಗಳೇನು ?

## ಗ್ರಾಮ ಪಂಚಾಯತ್ ಸದಸ್ಯರ ಬೇಡಿಕೆಗಳ ಕುರಿತು

**ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೮ (೧೩೮೧) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ಬೇಡಿಕೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಗ್ರಾಮ ಪಂಚಾಯತ್ ಅಧ್ಯಕ್ಷರಿಗೆ/ಸದಸ್ಯರಿಗೆ ಪಿಂಚಣಿ (Pension) ನೀಡುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ ; ಈ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು ?

# SCSP/TSP ಅಡಿಯಲ್ಲಿ ಬಿಡುಗಡೆಯಾದ ಮತ್ತು ಬಳಕೆಯಾದ ಅನುದಾನದ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೯ (೧೨೯೫) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩–೨೪, ೨೦೨೪–೨೫ ಮತ್ತು ೨೦೨೫–೨೬ನೇ ಆರ್ಥಿಕ ಸಾಲಿನಲ್ಲಿ SCSP ಹಾಗೂ TSP ಅಡಿಯಲ್ಲಿ ಮೀಸಲಿಡಲಾದ ಹಾಗೂ ಬಿಡುಗಡೆಯಾದ ಅನುದಾನವೆಷ್ಟು ; ಸದರಿ ಅನುದಾನದ ಪೈಕಿ ವಾಸ್ತವಿಕವಾಗಿ ನಿಗದಿತ ಉದ್ದೇಶಕ್ಕಾಗಿ ಬಳಕೆ ಮಾಡಿದ ಹಾಗೂ ಬಾಕಿ ಉಳಿದ ಅನುದಾನವೆಷ್ಟು ; (ಇಲಾಖೆವಾರು ಹಾಗೂ ಜಿಲ್ಲಾವಾರು ವಿವರ ಒದಗಿಸುವುದು)

(ಆ) ೨೦೨೩–೨೪, ೨೦೨೪–೨೫ ಮತ್ತು ೨೦೨೫–೨೬ ನೇ ಸಾಲಿನ ಸದರಿ ಉಪಯೋಜನೆಗಳಡಿ ಮೀಸಲಾದ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಆಗಿದೆಯೇ ; ಬಳಸಿದ್ದರೆ, ಎಷ್ಟು ಮೊತ್ತವನ್ನು SCSP ಹಾಗೂ TSP ಯಿಂದ ತೆಗೆಯಲಾಗಿದೆ ಎಂಬ ವಿವರವನ್ನು ಒದಗಿಸುವುದು ; ಪ್ರತಿಯೊಂದು ಗ್ಯಾರಂಟಿ ಯೋಜನೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಸಂಖ್ಯೆ ಎಷ್ಟು ; (ಪ್ರತಿಯೊಂದು ಗ್ಯಾರಂಟಿ ಯೋಜನೆಯ ಅನುಸಾರ ಮಾಹಿತಿ ನೀಡುವುದು)

(ಇ) ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗೆ ವರ್ಗಾಯಿಸಿದ್ದಲ್ಲಿ ಅದನ್ನು ಬಳಕೆ ಮಾಡಿಕೊಂಡಿದ್ದಲ್ಲಿ ಒಂದು ವೇಳೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಮಾಹಿತಿ ಇಲ್ಲದಿದ್ದರೆ, ಅವರು ಫಲಾನುಭವಿ ಆಗಿಲ್ಲದಿದ್ದರೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯ ಹಣವನ್ನು ದುರ್ಬಳಕೆ ಮಾಡಿಕೊಂಡಂತೆ ಆಗುವುದಿಲ್ಲವೇ ; ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆಯ ಉಲ್ಲಂಘನೆ ಹಾಗೂ ದಲಿತರ ಕಲ್ಯಾಣಕ್ಕೆ ಹಿನ್ನಡೆಯಾಗುವುದಿಲ್ಲವೇ ;

(ಈ) ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಲ್ಲಿ ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಿರುವುದು ದಲಿತರಿಗೆ ಮಾಡಿದ ಅನ್ಯಾಯವಲ್ಲವೇ ; ಆ ವರ್ಗಗಳ ಶ್ರೇಯೋಭಿವೃದ್ಧಿಗೆ ಕೊಕ್ಕೆ ಹಾಕಿದಂತೆ ಆಗುವುದಿಲ್ಲವೇ ;

(ಉ) ದಲಿತರ ಸಂವಿಧಾನಾತ್ಮಕ ಹಕ್ಕನ್ನು ಕಸಿದಂತೆ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಬಳಕೆ ಮಾಡಿರುವ ಹಣವನ್ನು ಮತ್ತೆ ಎಸ್‌ಸಿಎಸ್‌ಪಿ/ ಟಿಎಸ್‌ಪಿ ಯೋಜನೆಯಲ್ಲಿ ವಿನಿಯೋಗ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

## ಹಿಂದುಳಿದ ವರ್ಗಗಳ ಸಮಾಜದ ಅಭಿವೃದ್ಧಿಗೆ ಅನುದಾನ ನೀಡುವ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಶಿಕ್ಷಕರ ಕ್ಷೇತ್ರ) –**

೧೩೦ (೧೪೧೪) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಅಭಿವೃದ್ಧಿ ನಿಗಮಗಳೆಷ್ಟು ; ಅವುಗಳಲ್ಲಿ ಒಟ್ಟಾರೆ ಸರ್ಕಾರದ ಅಭಿವೃದ್ಧಿ ನಿಗಮಗಳೆಷ್ಟು ; ಸಮಾಜದ ಅಭಿವೃದ್ಧಿ ನಿಗಮಗಳೆಷ್ಟು ;

(ಆ) ಹಿಂದಿನ ಮೂರು ವರ್ಷಗಳಿಂದ ಅಭಿವೃದ್ಧಿ ನಿಗಮಗಳಿಗೆ ಪ್ರತ್ಯೇಕವಾಗಿ ನಿಗದಿಪಡಿಸಿದ ಅನುದಾನವೆಷ್ಟು ;

(ಇ) ಎಷ್ಟು ಅಭಿವೃದ್ಧಿ ನಿಗಮಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಲಾಗಿದೆ ; ಮಾಡದೆ ಇದ್ದಲ್ಲಿ ಇದಕ್ಕೆ ಕಾರಣಗಳೇನು ;

(ಈ) ಅಭಿವೃದ್ಧಿ ನಿಗಮಗಳಿಗೆ ಪೂರಕವಾಗಿ ರೂಪಿಸಿದ ಯೋಜನೆಗಳಾವುವು; ಇದಕ್ಕೆ ನಿಗದಿಪಡಿಸಿರುವ ಅನುದಾನವೆಷ್ಟು , ಖರ್ಚಾಗಿರುವ ಅನುದಾನವೆಷ್ಟು , ಉಳಿಕೆಯಾಗಿರುವ ಅನುದಾನವೆಷ್ಟು ;

(ಉ) ಅಭಿವೃದ್ಧಿ ನಿಗಮಗಳಿಗೆ ಮೂರು ವರ್ಷಗಳಿಂದ ನೀಡಿರುವ ಅನುದಾನದಲ್ಲಿ ಅಧ್ಯಕ್ಷರ ಭತ್ಯೆ, ವಾಹನ ಭತ್ಯೆ, ಬಾಡಿಗೆ ಹಾಗೂ ಇತರೆ ಖರ್ಚುಗಳೆಷ್ಟು ? ( ವಿವರದೊಂದಿಗೆ ಮಾಹಿತಿ ನೀಡುವುದು )

## ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯಡಿ ಕೆಲಸ ಮಾಡುತ್ತಿರುವ ಕೂಲಿ ಕಾರ್ಮಿಕರ ಕುರಿತು

**ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) –**

೧೩೧ (೧೩೭೦) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯಡಿ ಕೆಲಸ ಮಾಡುತ್ತಿರುವ ಕೂಲಿ ಕಾರ್ಮಿಕರ ಸಂಖ್ಯೆ ಎಷ್ಟು ; ಪ್ರತಿ ಕೂಲಿ ಕಾರ್ಮಿಕರಿಗೆ ನೀಡುವ ಕೂಲಿ ಮೊತ್ತವೆಷ್ಟು ; ಇವರಿಗೆ ವೇತನವನ್ನು ಕಾಲಕಾಲಕ್ಕೆ ಪಾವತಿಸಲಾಗಿದೆಯೇ ; ಇಲ್ಲವಾದರೆ ಎಷ್ಟು ತಿಂಗಳ ವೇತನ ಬಾಕಿ ಇದೆ ;

(ಆ) ಈ ಯೋಜನೆಯಡಿ ಹೊರಗುತ್ತಿಗೆ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆಯೇ ; ರಾಜ್ಯದಲ್ಲಿ ಎಷ್ಟು ಜನ ಕಾರ್ಯನಿರ್ವಹಿಸುತ್ತಿದ್ದಾರೆ ; ಪ್ರತಿ ವರ್ಷ ಇವರಿಗೆ ನೀಡುವ ವೇತನದ ಒಟ್ಟು ಮೊತ್ತವೆಷ್ಟು ;

(ಇ) ಕೂಲಿ ಕಾರ್ಮಿಕರು ಹಾಗೂ ಹೊರಗುತ್ತಿಗೆ ನೌಕರರಿಗೆ ವೇತನಕ್ಕಾಗಿ ವಾರ್ಷಿಕ ಎಷ್ಟು ಮೊತ್ತ ಸರ್ಕಾರದಿಂದ ವ್ಯಯವಾಗುತ್ತಿದೆ ;

(ಈ) ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಕೇಂದ್ರ ಸರ್ಕಾರ ನೀಡುವ ಅನುದಾನವೆಷ್ಟು ;

೨೦೨೪–೨೫ ರಿಂದ ೨೦೨೫–೨೬ರ ಅವಧಿಯ ಕೇಂದ್ರ ಸರ್ಕಾರದ ಅನುದಾನವನ್ನು ರಾಜ್ಯ ಸರ್ಕಾರಕ್ಕೆ ನೀಡಲಾಗಿದೆಯೇ ; ಪ್ರತಿ ಕೂಲಿ ಕಾರ್ಮಿಕರಿಗೆ ವೇತನ ಪಾವತಿಯ ವಿಧಾನವೇನು ?

## ಅರಣ್ಯ ಹಕ್ಕು ಕಾಯ್ದೆಯಡಿ ಹಕ್ಕುಪತ್ರ ನೀಡುವಲ್ಲಿ ಆಗುತ್ತಿರುವ ಅನ್ಯಾಯದ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) –**

೧೩೨ (೧೪೨೦) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ಬುಡಕಟ್ಟು ಜನಾಂಗದ ಅನೇಕರಿಗೆ ಹಕ್ಕುಪತ್ರ ನೀಡುವ ಪ್ರಕ್ರಿಯೆ ಸಮರ್ಪಕವಾಗಿ ಆಗದೆ ಅರಣ್ಯ ಹಕ್ಕು ಸಮಿತಿಯಲ್ಲಿ ೧ ಎಕರೆ ಸಾಗುವಳಿ ಮಾಡುವವರು ದಾಖಲೆ ಕೊಟ್ಟಿರುವವರಿಗೆ ಕೆಲವೇ ಗುಂಟೆಗಳಿಗೆ ಮಾತ್ರ ಹಕ್ಕುಪತ್ರ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ , ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಹಕ್ಕು ಕಾಯ್ದೆಯಡಿ ಬುಡಕಟ್ಟು ಜನಾಂಗ ದವರಿಂದ ಸ್ವೀಕೃತವಾಗಿರುವ ಅರ್ಜಿಗಳು ಹಕ್ಕುಪತ್ರ ನೀಡಿರುವ ಕುಟುಂಬಗಳು ಮತ್ತು ತಿರಸ್ಕೃತಗೊಂಡಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ಜಿಲ್ಲೆಯಲ್ಲಿ ಅನೇಕರಿಗೆ ಅರಣ್ಯ ಹಕ್ಕು ಕಾಯ್ದೆಯಡಿ ಗ್ರಾಮ ಅರಣ್ಯ ಹಕ್ಕು ಸಮಿತಿ ಮಟ್ಟದಲ್ಲಿ GPS ಮಾಡಿ ಅಂತಿಮಗೊಳಿಸಿದಷ್ಟು ಭೂಮಿಗೆ ಹಕ್ಕುಪತ್ರ ನೀಡದೆ ಕಡಿಮೆ ಗುಂಟೆಗಳಲ್ಲಿ ಮಾತ್ರ ಹಕ್ಕುಪತ್ರ ಭೂಮಿಗೆ ನೀಡಲು ಸೂಕ್ತ ಕಾರಣಗಳೇನು ; ಇದನ್ನು ಸರಿಪಡಿಸಲು ಇರುವ ಮಾನದಂಡಗಳು ಮತ್ತು ಸರ್ಕಾರದ ಮುಂದಿನ ಕ್ರಮಗಳೇನು ? (ಮಾಹಿತಿ ಒದಗಿಸುವುದು )

## ನರೇಗಾ ಯೋಜನೆಯಲ್ಲಿನ ಅಕ್ರಮಗಳ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೩ (೧೩೫೭) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೇಂದ್ರದಿಂದ ಕಳೆದ ೫ ವರ್ಷಗಳಲ್ಲಿ ಕರ್ನಾಟಕಕ್ಕೆ ಬಿಡುಗಡೆಯಾದ ಹಣವೆಷ್ಟು ;

(ಆ) ಈ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅಕ್ರಮಗಳು ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ಸಂಬಂಧ ಹಣ ದುರುಪಯೋಗವಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು ;

(ಈ) ಸತ್ತವರು, ಅನರ್ಹ ವ್ಯಕ್ತಿಗಳು ಹಾಗೂ ಕೆಲಸ ನಿರ್ವಹಿಸದ ವ್ಯಕ್ತಿಗಳಿಗೂ ಹಣ ಪಾವತಿ ಮಾಡಿರುವುದು ನಿಜವೇ ;

(ಉ) ಸರ್ಕಾರ ಈ ಸಂಬಂಧ ಕೈಗೊಂಡ ಕ್ರಮಗಳೇನು ?

## ಅಪೌಷ್ಠಿಕತೆಯಿಂದ ಕೂಡಿರುವ ತಾಯಿ ಮತ್ತು ಶಿಶುಗಳ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೪ (೧೩೬೨) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕ ಭಾಗದಲ್ಲಿ ಅವಧಿ ಪೂರ್ವ ಕಡಿಮೆ ತೂಕ ಹಾಗೂ ಅನಾರೋಗ್ಯಪೀಡಿತ ಶಿಶುಗಳಿಗೆ ತಾಯಿಯ ಎದೆಹಾಲಿನಲ್ಲಿ ಕೊರತೆ (ಅಪೌಷ್ಠಿಕತೆ) ಎದುರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ರೀತಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ತಾಯಿ ಮತ್ತು ಶಿಶುಗಳ ಸಂಖ್ಯೆ ಎಷ್ಟು ;

(ಇ) ಈ ಅಪೌಷ್ಠಿಕತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಅಮೃತಧಾರೆ ಯೋಜನೆಯಲ್ಲಿ ಈ ಅಪೌಷ್ಠಿಕತೆಯನ್ನು ಹೋಗಲಾಡಿಸಲು ಅಗತ್ಯವಿರುವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆಯೇ ?

## SCSP/TSP ಅಡಿಯಲ್ಲಿ ೨೦೨೧–೨೨, ೨೦೨೨–೨೩, ೨೦೨೩–೨೪ ಹಾಗೂ ೨೦೨೪–೨೫ ಹಣಕಾಸು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನಗಳ ಬಗ್ಗೆ

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) –**

೧೩೫ (೧೩೧೨) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ ಮಹತ್ವಾಕಾಂಕ್ಷೆ ಕಾಯ್ದೆ SCSP/TSP ಅಡಿಯಲ್ಲಿ ಕೃಷಿ ಇಲಾಖೆಗೆ ೨೦೨೧–೨೨, ೨೦೨೨–೨೩, ೨೦೨೩–೨೪ ಹಾಗೂ ೨೦೨೪–೨೫ ಹಣಕಾಸು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನವೆಷ್ಟು ;

(ಆ) ಸದರಿ ಹಣಕಾಸು ವರ್ಷಗಳ ಅವಧಿಗಳ ಕೃಷಿ ಇಲಾಖೆಗೆ ಬಿಡುಗಡೆಯಾಗಿರುವ SCSP/TSP ಅನುದಾನಗಳನ್ನು ಯಾವ ಯಾವ ಯೋಜನೆಗಳ ಜಾರಿಗೆ ವ್ಯಯಿಸಲಾಗಿದೆ ;

(ಇ) SCSP/TSP ಕಾಯ್ದೆಯ ಸೆಕ್ಷೆನ್ ೧೭ರ ಅನ್ವಯ ಕೃಷಿ ಇಲಾಖೆಯು ಸದರಿ ಹಣಕಾಸು ವರ್ಷಗಳ ಅವಧಿಗಳಲ್ಲಿ ಪರಿಶಿಷ್ಟ ಸಮುದಾಯ ಹಾಗೂ ಸಾಮಾನ್ಯ ಸಮುದಾಯದ ಅಭಿವೃದ್ಧಿ ಅಂತರವನ್ನು ಗುರುತಿಸಿ, ಸಂಬಂಧಿಸಿದ ಸಮುದಾಯ ಅಭಿವೃದ್ಧಿ ಅಭ್ಯಯಿಸಿ/ಸಮಾಲೋಚಿಸಿ ತಯಾರಿಸಿರುವ ಅನುದಾನ ವಿನಿಯೋಗಗಳಿಗೆ ಸಂಬಂಧಿಸಿದ ಉಪಯೋಜನೆ ಕಾರ್ಯಯೋಜನೆಗಳಾವುವು ; (ಪ್ರತಿಗಳನ್ನು ಒದಗಿಸುವುದು)

(ಈ) SCSP/TSP ಕಾಯ್ದೆಯ ಸೆಕ್ಷೆನ್ ೧೫ ಹಾಗೂ ೧೬ರಡಿ ಕಡ್ಡಾಯ ಪಡಿಸಿರುವಂತೆ ಸದರಿ ಅನುದಾನದಡಿ ಬಿಡುಗಡೆಯಾಗಿರುವ ಹಣವನ್ನು ಕೇವಲ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿರುವ ವ್ಯಕ್ತಿ, ಸದರಿ ಸಮುದಾಯ ವಾಸಿಸುತ್ತಿರುವ ಕಾಲೋನಿ/ಪ್ರದೇಶಗಳ ಅಭಿವೃದ್ಧಿಗೆ ಮಾತ್ರ ಬಳಸಲು ಖಾತ್ರಿಪಡಿಸಲು ಕೃಷಿ ಇಲಾಖೆ ಕೈಗೊಂಡಿರುವ ಕ್ರಮಗಳಾವುವು ? (ಸಂಬಂಧಿಸಿದ ದಾಖಲೆ ಒದಗಿಸುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ–308, 600 ಪ್ರತಿಗಳು (ಪಿ6)

**List of Questions**
**for Oral Answers**

**Total No. of**
**Questions - 15**

# LIST - 09

# KARNATAKA LEGISLATIVE COUNCIL

## ONE HUNDRED AND FIFTY SIXTH SESSION

## Friday, the 22nd August, 2025

---

**GROUP - V**

1. Minister for Social Welfare
2. Minister for Rural Development and Panchayat Raj and Information Technology and Bio-Technology
3. Minister for Agriculture
4. Minister for Labour
5. Minister for Backward Classes Welfare and Kannada and Culture
6. Minister for Planning and Statistics
7. Minister for Women and Child Development and Empowerment of Differently Abled and Senior Citizens

---

**INFORMATION OF TRIBAL PEOPLE**
**RESIDING IN VARIOUS FOREST AREA**

**Smt. Bharathi Shetty (Nominated)-**

121 (1282) Will the Minister for Social Welfare be pleased to state:-

a) the number of tribal people who are residing in the State at present ; (various forest areawise details be furnished)

b) the manner in which the study of special skills which have been acquired by the said communities has been conducted by the Government ;

c) the manner in which the education has been provided by the Government for all the said communities ;

d) the efforts of the Government to bring them into the mainstream of the society ? (the information of achievements in this regard along with yearwise statistics be furnished)

## HEALTH CHECK UP FOR WORKERS BY THE LABOUR DEPARTMENT

**Sri K.S. Naveen (Local Authorities Constituency) -**

122 (1269) Will the Minister for Labour be pleased to state:-

a) whether the health checkup has been carried out for the labours during the last two years; the particular of agency from which this checkup has been carried out ; the grant that has been provided by the department for the same ; (complete details be furnished)

b) the particulars of types of tests that have been conducted to the labours in the said checkup ; (details be furnished)

c) recently the highest number of heart attacks and cardiac arrests cases are being increased in the State, since the construction workers and other workers are hard workers, the steps taken by the Government with regard to their heart screening test ; the manner in which the checkup has been carried out ? (details be furnished)

## MINIMUM WAGES IN THE LABOUR DEPARTMENT

**Sri D.S. Arun (Local Authorities Constituency) -**

123 (1406) Will the Minister for Labour be pleased to state:-

a) whether the wages is being revised in the Labour Department ; if so, the detailed information be furnished ;

b) the details of the difference amount between the minimum wage in our State and the minimum wage that has been fixed by the Labour Department in the neighboring states ; (information be furnished)

c) whether it has come to the notice of the Government that hardship is being caused to industries of the State due to the effect of revision of minimum wages ; if so, the step taken against for the same ?

**APPOINTMENT OF MEMBERS OF THE LEGISLATIVE COUNCIL TO THE COASTAL DEVELOPMENT BOARD**

**Sri Ivan D'Souza (Elected by Legislative Assembly) -**

124 (1026) Will the Minister for Planning and Statistics be pleased to state:-

a) the reasons for not nominating the Members who have been elected to Legislative Council from the coastal region as the Member of the Coastal Development Board ;

b) if the members who have been elected from the Legislative Assembly have selected south canara as their nodal district, whether they are being identified separately by the Government ; (details be furnished)

c) the Nominated Members of the Legislative Council have been appointed as a member of the Malnad Area Development Board earlier, whether it is right that the disrespect has been showned by the board without respecting them as other members eventhough they are elected members ? (details be furnished)

## NON CREDIT OF AMOUNT UNDER GRUHALAKSHMI SCHEME

**Sri P.H.Pujar (Local Authorities Constituency) -**

125 (1334) Will the Minister for Women and Child Development and Empowerment of Differently Abled and Senior Citizens be pleased to state:-

a) the amount of Rs.2000/- is being paid per month for the account of eligible beneficiaries under the Gruhalakshmi Scheme which have the intention of empowerment of women in the State, whether it has come to the notice of the Government that from the commencement of this scheme the amount of Rs 2000/- per month is being credited for several women continuously but recently from several months some of the women have not being receiving Rs 2000/- considering that they are paying IT-GST ; the number of such women ; if so, whether it is true that the complaints have been received that the amount has been denied due to the negligence of officers and in the pretext of technical error ; (districtwise information be furnished)

b) whether it has come to the notice of the Government that the hardship is being faced by the women due to the prescribed amount has not been credited to their account under the Gruhalakshmi Scheme eventhough the documents that have been provided for concerned persons through the concerned department stating that such women are not tax payers; if so, whether the amount would be credited to them immediately ? (the information be furnished)

## PROTESTS BY THE LABOUR ORGANIZATIONS

**Sri Prathap Simha Nayak K.(Elected by Legislative Assembly) -**

**Sri N.Ravikumar (Elected by Legislative Assembly) -**

126 (1260+1254) Will the Minister for Labour be pleased to state:-

a) whether it has come to the notice of the Government that a severe protest has been conducted by the several labour organizations across the State due to hardship is being caused to the welfare programmes of workers since the tender has been awarded to private agencies by framing the schemes which are not required to labourers in the Karnataka State Building and Other Construction Workers' Welfare Board ;

b) if so, the reasons for the tenders which have been awarded for private agencies by implementing the unnecessary schemes like health camp, mobile health clinic, R.P.L training with kit, tools kit, nutrition kit, immunity kit even though there is a strong opposition of workers for the said schemes ;

c) the particulars of items in the tools kit that would be provided to building construction workers by the Building Workers' Welfare Board ; the particulars of agencies from which the said tool kits are being purchased ; the particulars of items in the tool kits and the details along with the name and price of each items be furnished ;

d) the number of building construction workers for whom the tool kits have been distributed so far; the total amount that has been spent to the said tool kit ; (the districtwise information along with names of the building construction workers who have received the kit be furnished)

e) the amount is being misappropriated due to the tender has been awarded to private agencies for the implementation of the schemes which have been unusefull and unnecessary to workers in Labour Welfare Board, whether the necessary step would be taken by the Government immediately to implement the schemes which will provide direct cash transfer to workers instead of the same ?

## LOCAL AREA DEVELOPMENT FUND OF MEMBERS OF THE LEGISLATIVE COUNCIL

**Sri Nirani Hanamant Rudrappa (Graduates' Constituency) -**

127 (1301) Will the Minister for Planning and Statistics be pleased to state:-

a) the reasons for withholding of local area development fund of Members of the Karnataka Legislative Council without implementing the works for more than two years; (information be furnished)

b) whether the works of the Legislators' local area development fund have been withholding without bringing to the notice of legislators; if so, the clear information that the reason for which the same has been withheld be furnished ;

c) whether there is a provision in the guidelines for re-utilising the local area development fund of members of the legislative council ; if so, the information be furnished ;

d) the particulars of reasons for which the grant has been withheld ; (the information along with an appropriate reason be furnished)

e) the reasons for not providing the provision for re-utilising the grant for works that have not been utilised exceeding two years ?

## DEMANDS OF MEMBERS OF GRAM PANCHAYAT

**Sri Sunilgouda Patil (Local Authorities Constituency) -**

128 (1381) Will the Minister for Rural Development and Panchayat Raj and Information Technology and Bio-Technology be pleased to state:-

a) whether the demands of Presidents and Vice-Presidents and Members of Gram Panchayat have come to the notice of the Government ;

b) the steps taken by the Government to fulfill the demands of Presidents, Vice-Presidents and Members of Gram Panchayat ;

c) whether the proposal is before the Government to provide the pension for presidents/members of Gram Panchayat ; the clear stand of the Government in this regard ?

## GRANT RELEASED AND UTILIZED UNDER SCSP/TSP

**Smt Hemalatha Nayak (Elected by Legislative Assembly) -**

129 (1295) Will the Minister for Social Welfare be pleased to state:-

a) the grant that has been earmarked and released under SCSP and TSP in the financial years 2023-24, 2024-25 and 2025-26; out of the said grant, the grant that has been utilized for actual prescribed purpose and remaining unspent ; (departmentwise and districtwise details be furnished)

b) whether the amount that has been earmarked under the said sub plans during the years 2023-24, 2024-25 and 2025-26 has been utilized for guarantee schemes ; if so, the details of the amount that has been diverted from SCSP and TSP be furnished ; the number of

beneficiaries of scheduled castes and scheduled tribes in each guarantee scheme ; (information as per each guarantee scheme be furnished)

c) if the amount that has been earmarked for the welfare of scheduled castes has been transferred to the guarantee scheme and utilized, if there is no information about the beneficiaries of scheduled castes and scheduled tribes and if they are not beneficiaries, whether it will cause misuse of the amount of SCSP/ TSP Scheme ; whether there is violation of the SCSP/ TSP ACT and hindrance to the welfare of dalits ;

d) whether it will cause injustice for Dalits from the transfer of the amount that has been earmarked for the welfare of scheduled castes under SCSP/TSP Scheme into the guarantee schemes by the State Government ; whether it will cause set back to the welfare of the said classes ;

e) whether the step would be taken by the Government to utilize the amount that has been utilized for the implementation of guarantee schemes again in the SC SP/TSP Scheme without deprivation of constitutional rights of Dalits ?

## PROVIDING GRANT FOR THE DEVELOPMENT OF BACKWARD CLASSES COMMUNITY

**Sri D.T.Srinivas (D.T.S) (Teachers' Constituency) -**

130 (1414) Will the Minister for Backward Classes Welfare and Kannada and Culture be pleased to state:-

a) the total number of Development Corporations in the State ; out of which, the total number of development corporations of the Government ; the number of community development corporations ;

b) the grant that has been earmarked for the development of corporations separately during the last three years ;

c) the number of development corporations for which the chairman has been appointed ; if not, the reasons for same ;

d) the particulars of schemes that have been chalked out for supplemental to development corporations ; the grant that has been earmarked, spent and remaining unspent for the same ;

e) out of the grant that has been provided to development corporations during the last three years, the grant that has been spent for the allowance of chairman, vehicle, rent and other expenses ? (information along with details be furnished)

## WAGE WORKERS UNDER MAHATMA GANDHI NATIONAL RURAL EMPLOYMENT GUARANTEE SCHEME

**Dr.Umashree (Nominated) -**

131 (1370) Will the Minister for Rural Development and Panchayat Raj and Information Technology and Bio-Technology be pleased to state:-

a) the number of wage workers who are working under Mahatma Gandhi National Rural Employment Guarantee Scheme in the State ; the wage amount that has been paid to each wage workers ; whether the wage has been paid from time to time ; if not, the number of months for which the wage has been pending ;

b) whether the outsource employees are working under this scheme ; the number of persons who are working in the State ; the total amount of wage that is being paid to them every year ;

c) the amount that is being spent by the Government for the payment of wage workers and outsource employees annually ;

d) the grant that has been provided by the Central Government for Mahatma Gandhi National Rural Employment Guarantee Scheme ; whether the grant of the Central Government during the period of 2024-25 to 2025-26 has been provided to the State Government ; the mode of payment for each wage workers ?

**INJUSTICE FOR PROVIDING TITLE DEED UNDER THE FOREST RIGHTS, ACT**

**Sri Shantharama Budna Siddi (Nominated) -**

132 (1420) Will the Minister for Social Welfare be pleased to state:-

a) whether it has come to the notice of the Government that the process of providing title deed for most of the people of tribal community under the Forest Rights, Act has not been implemented properly and the title deed has been provided merely for some guntas of land for the persons who have submitted the document in the forest rights committee and cultivating 1acre of land ; if so, the steps taken by the Government ;

b) the number of families in which the applications have been received, the title deed have been provided and the number of applications have been rejected for tribal communities under the Forest Rights, Act in Uttara Kannada district ; (complete information be furnished)

c) an appropriate reasons for providing title deed only for meager Guntas of land without providing the same for the extent of land has been finalized by executing GPS in the forest rights committee level under the Forest

Rights, Act for most of the persons in the said district ; the prevailing yardsticks to setright the same and the steps taken by the Government ? (the information be furnished)

**IRREGULARITIES IN MGNREGA SCHEME**

**Sri C.N. Manje Gowda (Local Authorities Constituency) -**

133 (1357) Will the Minister for Rural Development and Panchayat Raj and Information Technology and Bio-Technology be pleased to state:-

a) the amount that has been released by the Central Government to Karnataka under the Mahatma Gandhi National Rural Employment Guarantee Scheme during the last five years ;

b) whether it has come to the notice of the Government that the irregularities that have been reported under this scheme ;

c) if so, the number of cases in which the amount has been misappropriated in this regard ;

d) whether it is true that the amount has been paid to deceased, ineligible persons and the persons who have not came to the work ;

e) the steps taken by the Government in this regard ?

**MALNOURISHED MOTHERS AND INFANTS**

**Sri Thippanappa Kamaknoor (Elected by Legislative Assembly) -**

134 (1362) Will the Minister for Women and Child Development and Empowerment of Differently Abled and Senior Citizens be pleased to state:-

a) whether it has come to the notice of the Government that malnutrition has been posed due to low weight in premature and shortage in the breast milk of mother for unhealthy infants in Kalyana Karnataka Region ;

b) if so, the number of mothers and infants who are suffering from malnutrition in this manner ;

c) the steps taken by the Government with regard to eliminating this malnutrition ;

d) whether the necessary programmes have been chalked out to eliminate this malnutrition under Amruthadhare scheme ?

**GRANTS RELEASED UNDER SCSP/TSP**

**Sri H.P. Sudham Das (Nominated) -**

135 (1312) Will the Minister for Agriculture be pleased to state:-

a) the grant that has been released to the Agriculture Department under the Governments' Ambitious SCSP and TSP, Act for the financial years 2021-22, 2022-23, 2023-24 and 2024-25 ;

b) out of the SCSP and TSP grants that have been released to Agriculture Department during the said financial years, the particulars of schemes of implementation for which the same has been spent ;

c) the particulars of work plans of sub-plans with regard to allocation of grant that has been prepared by conducting study/consulting with relevant community development by identifying the development gap between the scheduled community and the general community during the said financial years by the Agriculture Department as per section 17 of SCSP and TSP, Act ; (copies be furnished)

d) the steps taken by the Agriculture Department to ensure the amount that has been released under the said grant is being utilized only for the development of peoples belonging to scheduled caste or scheduled tribes and the colony/areas where the said community people are residing as made mandatory under section 15 and 16 of SCSP and TSP, Act ? (concerned documents be furnished)

**K.R. MAHALAKSHMI**
Secretary
Karnataka Legislative Council

Govt. Press, Vikasa Soudha Unit, Bengaluru, WD-308/P5